# ರೂರಲ್ ಕಾಲೇಜು, ಕನಕಪುರ – 562117

## ರಾಷ್ಟ್ರೀಯ ಸೇವಾ ಯೋಜನೆ

## ವಾರ್ಷಿಕ ವಿಶೇಷ ಶಿಬಿರದ ವರದಿ – 2017-18

ರೂರಲ್ ಪದವಿ ಕಾಲೇಜು, ಕನಕಪುರ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ 2017-18 ನೇ ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿಯ ಜವನಮ್ಮನದೊಡ್ಡಿ ಗ್ರಾಮದಲ್ಲಿ ದಿನಾಂಕ 22-03-2018 ರಿಂದ 28-03-2018 ರವರೆಗೆ 7 ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಸುಮಾರು 80 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರಾಧಿಕಾರಿಯಾಗಿ ಪ್ರೊ. ಎ.ಪಿ. ಪ್ರಕಾಶ, ಸಹ ಶಿಬಿರಾಧಿಕಾರಿಯಾಗಿ ಶ್ರೀ ಅರುಣ್ ಕುಮಾರ್ ಹಾಗೂ ಎನ್.ಎಸ್.ಎಸ್. ಗೌರವ ಸಲಹೆಗಾರರಾದ ಪ್ರೊ. ದೇವರಾಜುರವರು ಶಿಬಿರದಲ್ಲಿ ಪಾಲ್ಗೊಂಡು ಮೇಲ್ವಿಚಾರಣೆ ಮಾಡಿದರು. ಶಿಬಿರದ ನಿರ್ದೇಶಕರು ಹಾಗೂ ಪ್ರಾಂಶುಪಾಲರಾದ ಪ್ರೊ. ವಿಕ್ರಂ, ಉಪ ಪ್ರಾಂಶುಪಾಲರಾದ ಪ್ರೊ. ನಂಜುಂಡಯ್ಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಶ್ರೀನಿವಾಸ್‌ರವರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವಿಶೇಷ ಶಿಬಿರದ 7 ದಿನಗಳ ಚಟುವಟಿಕೆಗಳಿಗೆ ಸಂಬಂಧಿಸಿದ ವರದಿ ಈ ಕೆಳಕಂಡಂತಿದೆ.

**ಶಿಬಿರದ ಮೊದಲನೆ ದಿನ :**

ದಿನಾಂಕ: 22-03-2018 ರಂದು ಬಾಡಿಗೆ ವಾಹನದಲ್ಲಿ ಶಿಬಿರಾರ್ಥಿಗಳ ಜೊತೆಗೂಡಿ ಬೆಳಿಗ್ಗೆ 11-00 ಗಂಟೆಗೆ ಶಿಬಿರದ ಸ್ಥಳವಾದ ಜವನಮ್ಮನದೊಡ್ಡಿ ಗ್ರಾಮವನ್ನು ತಲುಪಿ ಪ್ರಾಥಮಿಕ ಶಾಲೆ ಮತ್ತು ಸಮುದಾಯ ಭವನಗಳ ಕೊಠಡಿಗಳನ್ನು ಪಡೆದು ಮಹಿಳಾ ಮತ್ತು ಪುರುಷ ಶಿಬಿರಾರ್ಥಿಗಳಿಗೆ ಪ್ರತ್ಯೇಕವಾಗಿ ಕೊಠಡಿ ವ್ಯವಸ್ಥೆ ಮಾಡಿಕೊಡಲಾಯಿತು. ನಂತರ 7 ದಿನಗಳ ಸುಗುಮ ಕಾರ್ಯಚಟುವಟಿಕೆಗಳ ದೃಷ್ಟಿಯಿಂದ ತಂಡಗಳನ್ನುರಚಿಸಿ ಪ್ರತಿನಿತ್ಯದ ಕಾರ್ಯಚಟುವಟಿಕೆಗಳನ್ನು ಯಶಸ್ವಿಗೊಳಿಸಲು ತಿಳಿಸಲಾಯಿತು. ಶಿಬಿರದ ಕಾರ್ಯಕ್ರಮಕ್ಕನುಗುಣವಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಯಿತು. ಸಂಜೆ 6-30 ರ ವೇಳೆಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಇದರ ದಿವ್ಯ ಸಾನಿಧ್ಯವನ್ನು ಆದಿಚುಂಚನಗಿರಿ ಕನಕಪುರ ಶಾಖಾ ಮಠದ ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿದ್ಯಾಧರನಾಥ ಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೌರವ ಕಾರ್ಯದರ್ಶಿಗಳಾದ ಶ್ರೀ ಸಿ. ರಮೇಶ್‌ರವರು, ನಿರ್ದೇಶಕರುಗಳಾದ ಶ್ರೀ ಕೆ. ಬಿ. ನಾಗರಾಜುರವರು, ಶ್ರೀ ವೆಂಕಟೇಶಯ್ಯರವರು, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಮತಿ ಭಾಗ್ಯ ಶಾಂತಕುಮಾರ್‌ರವರು, ಚಾಕನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀದೇವಿ ನಾಗರಾಜುರವರು, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಸಾವಿತ್ರಮ್ಮ ಸಿದ್ಧಮರಿಗೌಡರವರು, ಪ್ರಾಂಶುಪಾಲರಾದ ಶ್ರೀ ಎಂ. ವಿಕ್ರಮ್ ರವರು ಮತ್ತು ಕಾಲೇಜಿನ ಅಧ್ಯಾಪಕರಾದ ಡಾ. ಎಂ. ಎಸ್. ಕೆಂಪೇಗೌಡ, ಪ್ರೊ. ತಮ್ಮಣ್ಣಗೌಡ, ಪ್ರೊ. ಎಸ್.ಪಿ. ರಮೇಶ್ ಲೆಫ್ಟಿನೆಂಟ್ ವಿಜೇಂದ್ರ, ಪ್ರೊ. ಸೌಮ್ಯ ಮೊದಲಾದವರು ಉಪಸ್ಥಿತರಿದ್ದು ಉದ್ಘಾಟನೆಯನ್ನು ನೆರವೇರಿಸಿಕೊಟ್ಟರು. ನಂತರ ಕಾರ್ಯಕ್ರಮದ ಉದ್ದಕ್ಕೂ ಪ್ರೊ. ದೇವರಾಜು ಹಾಗೂ ಹಿರಿಯ ಎನ್.ಎಸ್.ಎಸ್. ಸ್ವಯಂ ಸೇವಕರು ಹಾಗೂ ಉಪನ್ಯಾಸಕರಾದ ನಗೆಮಳೆರಾಜ ಚಂದ್ರಾಜ್ ಹಾಗೂ ಹೊಳಸಾಲಯ್ಯಧಾನವ್‌ರವರ ತಂಡ ವಾದ್ಯಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

**ಶಿಬಿರದ ಎರಡನೇ ದಿನ :**

ದಿನಾಂಕ: 23-03-2018 ರ ಎರಡನೇ ದಿನ ಬೆಳಗ್ಗೆ 6-00 ಗಂಟೆಗೆ ಎದ್ದು ಪ್ರಾತ ವಿದಿಗಳನ್ನು ಮುಗಿಸಿ 6-45 ಕ್ಕೆ ಎನ್.ಎಸ್.ಎಸ್ ಧ್ವಜಾರೋಹಣ ಪ್ರತಿಜ್ಞಾ ವಿಧಿಯನ್ನು ಬೋಧಿಸಿ ಎನ್.ಎಸ್.ಎಸ್. ಗೀತೆಯನ್ನು ಹಾಡಿಸಲಾಯಿತು. ಬೆಳಗಿನ ಉಪಹಾರವನ್ನು ಮುಗಿಸಿದ ನಂತರ ಪಶು ಆರೋಗ್ಯ ತಪಾಸಣಾ ಶಿಭಿರಕ್ಕೆ ರಾಸುಗಳನ್ನು ಮನೆ ಮನೆಗಳಿಗೆ ಹೋಗಿ ತರುವಂತೆ ಪ್ರೇರಪಿಸಲಾಯಿತು. ಕನಕಪುರದ ಪಶು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳ ತಂಡದಿಂದ ಸುಮಾರು 210 ಕುರಿ, 40 ಮೇಕೆ, 150 ಹಸುಗಳ ತಪಾಸಣೆಯನ್ನು ಮಾಡಿ ಕರುಳುಬೇನೆ ಲಸಿಕೆ, ಜಂತು ಹುಳ ನಾಶಕ ಔಷಧಿಯನ್ನು ನೀಡಿ ಚಿಕಿತ್ಸೆ ಮಾಡಿದರು. ನಿಶಕ್ತಿ ಹೊಂದಿರುವ ಎಲ್ಲಾ ರಾಸುಗಳಿಗೆ ಉಚಿತವಾಗಿ ಮಿನರಲ್ ಮಿಕ್ಸರ್ ಪಶು ಆಹಾರವನ್ನು ನೀಡಲಾಯಿತು. ತದನಂತರ ಗ್ರಾಮಸ್ಥರಿಗೆ ಮತ್ತು ಶಿಬಿರಾರ್ಥಿಗಳಿಗೆ ರಾಸುಗಳಿಗೆ ತಗಲುವ ರೋಗಗಳ ಬಗ್ಗೆ ಪಶು ವೈದಾಧಿಕಾರಿಯಾದ ಡಾ. ಪಂಕಜರವರು ಉಪನ್ಯಾಸ ನೀಡಿ, ಜಾಗೃತಿ ಮೂಡಿಸಿದರು. ಇದಕ್ಕೆ ಹಾಲು ಉತ್ಪಾದಕ ಸಂಘ ಸಹಕಾರವನ್ನು ನೀಡಿತ್ತು.

ಮಧ್ಯಾಹ್ನ 1-00 ಗಂಟೆಗೆ ಊಟವನ್ನು ಮುಗಿಸಿ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದರು. 3-00 ಗಂಟೆಗೆ 'ಸೈಬರ್ ಅಪರಾಧಗಳು' ಎಂಬ ವಿಷಯಕ್ಕೆ ವಕೀಲರಾದ ಶ್ರೀ ಗೋಪಾಲಗೌಡರು ಉಪನ್ಯಾಸವನ್ನು ನೀಡಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಎಚ್ಚರಿಕೆಯಿಂದ ಒಳ್ಳೆಯ ಉದ್ದೇಶಗಳಿಗಾಗಿ ಬಳಸಬೇಕೆಂದು ತಿಳಿಸಿದರು. ಈ ಸಂಧರ್ಭದಲ್ಲಿ ಪ್ರಾಧ್ಯಾಪಕರಾದ ಪ್ರೊ. ಚನ್ನಪ್ಪನವರು ಉಪಸ್ಥಿತರಿದ್ದರು. ನಂತರ ಚಹಾ ವಿರಾಮವನ್ನು ಮುಗಿಸಿ ಸಂಜೆಯ ವೇದಿಕೆಯನ್ನು ಸಿದ್ಧಗೊಳಿಸಲಾಯಿತು.

<u>ಸಾಯಂಕಾಲ 5-00 ಗಂಟೆಗೆ ಬೆಂ.ವಿ.ವಿ. ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಶ್ರೀನಿವಾಸ್ ರವರು ಶಿಬಿರದ ಸ್ಥಳಕ್ಕೆ ಆಗಮಿಸಿದ್ದರು. ತಕ್ಷಣವೇ ಶಿಬಿರಾಧಿಕಾರಿ ಅವರನ್ನು ಬರಮಾಡಿಕೊಂಡು ಚಹಾ ಅತಿಥ್ಯವನ್ನು ನೀಡಿ ವೇದಿಕೆಗೆ ಕರೆತರಲಾಯಿತು</u>. ಶಿಬಿರಾಧಿಕಾರಿಯಾದ ಎ. ಪಿ. ಪ್ರಕಾಶ್‌ರವರು ಅತಿಥಿಗಳನ್ನು ಸ್ವಾಗತಿಸಿದರು. ಡಾ. ಶ್ರೀನಿವಾಸರವರು ಮಾತನಾಡಿ ಶಿಭಿರಾರ್ಥಿಗಳು ಸ್ವಚ್ಛತೆ, ಪರಿಸರ, ಆರೋಗ್ಯ, ಜಲಸಂರಕ್ಷಣೆ ಮೊದಲಾದವುಗಳ ಬಗ್ಗೆ ಜನರಿಗೆ ಜಾಗೃತಿಯನ್ನು ಮೂಡಿಸಿ, ಪ್ರಸ್ತುತ ಇರಬಹುದಾದ ಜಾಗತಿಕ ಸಮಸ್ಯೆಗಳತ್ತ ಗಮನ ಹರಿಸುವಲ್ಲಿ ಶ್ರಮಿಸಬೇಕೆಂಬ ಸಂದೇಶವನ್ನು ಶಿಭಿರಾರ್ಥಿಗಳಿಗೆ ನೀಡಿ ಶಿಬಿರಾಧಿಕಾರಿ ಮತ್ತು ಪ್ರಾಂಶುಪಾಲರನ್ನು ಅಭಿನಂದಿಸಿದರು. ನಂತರ ಶ್ರೀಯುತರನ್ನು ವೇದಿಕೆಯಲ್ಲಿ ಗೌರವಿಸಿ ಬೀಳ್ಕೊಡಲಾಯಿತು. ಸಂಯೋಜನಾಧಿಕಾರಿಗಳಾದ ಡಾ. ಶ್ರೀನಿವಾಸರವರ ಈ ಭೇಟಿಯು ಶಿಬಿರಕ್ಕೆ ವಿಶೇಷವಾದ ಮೆರುಗನ್ನು ತಂದುಕೊಟ್ಟಿತ್ತು.

ಸಾಯಂಕಾಲ 6-30 ಗಂಟೆಗೆ ಸರಿಯಾಗಿ ಸಂಜೆಯ ಕಾರ್ಯಕ್ರಮ ಅರಣ್ಯ ಸಂಪತ್ತು ಮತ್ತು ಕಾಡ್ಗಿಚ್ಚು ನಿರ್ವಹಣೆಯಲ್ಲಿ ಅರಣ್ಯ ಇಲಾಖೆಯ ಪಾತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಯುವಜನತೆಯ ಪಾತ್ರ ಎಂಬ ವಿಷಯದಡಿಯಲ್ಲಿ ಕಾರ್ಯಕ್ರಮ ಆರಂಭಗೊಂಡಿತ್ತು. ಇದರ ಅಧ್ಯಕ್ಷತೆಯನ್ನು ಗ್ರಾಮ ವಿದ್ಯಾ ಪ್ರಚಾರಕ ಸಂಘದ ನಿರ್ದೇಶಕರಾದ ಶ್ರೀ ಪುಟ್ಟಸ್ವಾಮಿಗೌಡ ಕೆ.ಎಲ್. ವಹಿಸಿದ್ದರು. ಪ್ರಾಧ್ಯಾಪಕರುಗಳಾದ ಎಂ.ಬಿ ಬಾಲಕೃಷ್ಣ ಮತ್ತು ಡಿ. ಎಸ್ ನಾಗರಾಜು ವಿಷಯಗಳನ್ನು ಕುರಿತು ಮಾತನಾಡಿದರು. ನಂತರ ಆಕಾಶವಾಣಿ ಕಲಾವಿದರು ಮತ್ತು ಉಪನ್ಯಾಸಕರಾದ ಶ್ರೀ ಹೊಳಸಾಲಯ್ಯ ಮತ್ತು ಅವರ ವಾದ್ಯ ತಂಡದಿಂದ "ನಮ್‌ಪದ ಕೇಳಬನ್ನಿ" ಎಂಬ ಶೀರ್ಷಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿ ಹಲವಾರು ಜನಪದ ಗೀತೆಗಳನ್ನು ಹಾಡಿ ವೀರಗಾಸೆ ನೃತ್ಯ, ತಮಟೆವಾದ್ಯಗಳನ್ನು ಮಾಡಿ ಗ್ರಾಮಸ್ಥರನ್ನು ರಂಜಿಸಿ ಮತ್ತು ಗ್ರಾಮದ ಹಿರಿಯರನ್ನು ಸನ್ಮಾನಿಸಿದರು. ಪ್ರೊ. ದೇವರಾಜು ಮತ್ತು ಎಸ್.ಪಿ. ರಮೇಶ್ ಉಪಸ್ಥಿತರಿದ್ದು, ಕಾರ್ಯಕ್ರಮವು ಯಶಸ್ವಿಗೊಳ್ಳಲು ನೆರವಾದರು.

**ಶಿಬಿರದ ಮೂರನೇ ದಿನ :**

ದಿನಾಂಕ: 24-03-2018 ರ ಮೂರನೇ ದಿನ ಬೆಳಗ್ಗೆ ನಿತ್ಯಕರ್ಮಗಳನ್ನು ಮುಗಿಸಿ ಧ್ವಜಾರೋಹಣವನ್ನು ನೆರವೇರಿಸಿ ರಾಷ್ಟ್ರಗೀತೆಯನ್ನು ಹಾಡಲಾಯಿತು. ಸ್ವಲ್ಪ ಹೊತ್ತು ವ್ಯಾಯಾಮ ಮಾಡಿ ಬೆಳಗಿನ ಉಪಹಾರವನ್ನು ಸೇವಿಸಿ ಶಿಭಿರಾರ್ಥಿಗಳು ಆ ದಿನದ ಚಟುವಟಿಕೆಗಳನ್ನು ನಿರ್ವಹಿಸಲು ಸಜ್ಜಾದರು. ಬೆಳಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 2-00

ಗಂಟೆಯವರೆಗೆ ಕನಕಪುರ ಸುವರ್ಣಾ ನೇತ್ರ ಚಿಕಿತ್ಸಾಲಯದ ಸಹಯೋಗದೊಂದಿಗೆ ಸುಮಾರು 100 ಕ್ಕಿಂತ ಹೆಚ್ಚು ಜನರಿಗೆ ನೇತ್ರಾ ತಪಾಸಣೆ ಮಾಡಿಸಿ ತೊಂದರೆಯಿದ್ದವರಿಗೆ ಉಚಿತವಾಗಿ ಅಪರೇಷನ್ ಮಾಡಿಸಲು ಸ್ವಯಂ ಸೇವಾ ಸಂಘಟಕರನ್ನು ಕೋರಲಾಯಿತು. ಅದೇ ದಿನ ಬೆಳಿಗ್ಗೆ 10-00 ರಿಂದ ಮಧ್ಯಾಹ್ನ 1-30 ರವರೆಗೆ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ದೇವಸ್ಥಾನ ಮತ್ತು ಅವುಗಳ ಪಕ್ಕದಲ್ಲಿರುವ ನೀರಿನ ಕೊಳಗಳ ಸುತ್ತಲೂ ಇದ್ದ ಗಿಡಗಂಟಿಗಳನ್ನು ತೆಗೆದು ಸ್ವಚ್ಛಗೊಳಿಸಿದರು. ಮಧ್ಯಾಹ್ನ 3-00 ರಿಂದ 4-30 ಗಂಟೆಯವರೆಗೆ "ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆ ಮತ್ತು ಯುವಕರ ಪಾತ್ರ" ಎಂಬ ವಿಷಯವಾಗಿ ಡಾ. ಅಬಿದಾ ಬೇಗಂ **(Abida Begum)** ರವರು ಉಪನ್ಯಾಸ ನಡೆಸಿಕೊಟ್ಟರು. ಉಪ ಪ್ರಾಂಶುಪಾಲರಾದ ಪ್ರೊ. ನಂಜುಂಡಯ್ಯ,ಪ್ರೊ. ಮಹಮದ್ ಖಲೀಲ್ ಮತ್ತು ಅನಿಲ್ ರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಉಪ ಪ್ರಾಂಶುಪಾಲರು ಶಿಬಿರಾರ್ಥಿಗಳಿಗೆ ಹಣ್ಣು ಹಂಪಲುಗಳನ್ನು ನೀಡಿದರು.

ಸಂಜೆ 6-00 ಗಂಟೆಗೆ "ಕೃಷಿಯಲ್ಲಿ ತಾಂತ್ರಿಕತೆ ಮತ್ತು ಪೋಷಕಾಂಶಗಳ ನಿರ್ವಹಣೆ ಹಾಗೂ ಸಮಗ್ರ ಕೃಷಿ ಪದ್ಧತಿ" ಎಂಬ ಶೀರ್ಷಿಕೆಯಲ್ಲಿ ಕಾರ್ಯಕ್ರಮ ಆರಂಭಗೊಂಡಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೈತ ಮುಖಂಡ ಹಾಗೂ ಆರ್.ಇ.ಎಸ್.ನ ನಿರ್ದೇಶಕರಾದ ಶ್ರೀ ಕೆ.ಬಿ, ನಾಗರಾಜುವರವರು ವಹಿಸಿದ್ದರು. ಕೃಷಿ ಇಲಾಖೆಯ ಅಧಿಕಾರಿಗಳಾದ ಶ್ರೀ ಶ್ರೀನಿವಾಸ್, ಶ್ರೀ ರಾಮಯ್ಯರವರು ಕೃಷಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಇಂಜಿನಿಯರ್ ಶ್ರೀ ಚಿಕ್ಕಲಿಂಗೇಗೌಡ ರವರು ಚುಟುಕು ಕವನಗಳನ್ನು ಹಾಸ್ಯ ಚಟಾಕಿಗಳೊಂದಿಗೆ ಶಿಬಿರಾರ್ಥಿಗಳು ಮತ್ತು ಗ್ರಾಮಸ್ಥರುಗಳನ್ನು ರಂಜಿಸಿದರು. ಆರ್.ಇ.ಎಸ್. ನ ಖಜಾಂಚಿಗಳಾದ ಶ್ರೀ ಪುಟ್ಟಸ್ವಾಮಿರವರು ಭಾಗವಹಿಸಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೊ. ದೇವರಾಜು & ನರಸಿಂಹಯ್ಯ ಹಾಗೂ ಸ್ವಯಂ ಸೇವಕರು ನಡೆಸಿಕೊಟ್ಟರು.

**ಶಿಬಿರದ ನಾಲ್ಕನೇ ದಿನ :**

ದಿನಾಂಕ: 25-03-2018 ರ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ ಮತ್ತು ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ 35 ಕ್ಕಿಂತ ಹೆಚ್ಚಿನ ವೈದ್ಯಾಧಿಕಾರಿಗಳ ತಂಡದಿಂದ ಸುಮಾರು 350 ಕ್ಕಿಂತ ಹೆಚ್ಚಿನ ಜನರಿಗೆ ಆರೋಗ್ಯ ತಪಾಸಣೆ ಮಾಡಿ, ಉಚಿತವಾಗಿ ಔಷಧಿ ವಿತರಣೆ ಮಾಡಿಸಲಾಯಿತು. ಇದರ ಜೊತೆಗೆ ಗ್ರಾಮದ ಜನರಿಗೆ ಯೋಗ ಮತ್ತು ಸ್ಥಳೀಯವಾಗಿ ದೊರೆಯುವ ಸಸ್ಯಗಳ ಎಲೆಗಳಿಂದ ಹೇಗೆ ನೋವು ನಿವಾರಕ ಔಷಧಿಗಳನ್ನು ತಯಾರಿಸಿಕೊಳ್ಳಬಹುದೆಂಬ ಪ್ರತ್ಯೇಕ್ಷಿತೆಯನ್ನು ತೋರಿಸಿ ಅಲ್ಲೇ ಅದರ ಔಷಧಿಯನ್ನು ವಿತರಿಸಿದರು. ಶಿಬಿರಾರ್ಥಿಗಳಿಗೆ ಪ್ರಾತ್ಯಕ್ಷಿಕೆ ಮತ್ತು ಆರೋಗ್ಯ ತಪಾಸಣೆಗೆ ಬಂದಿದ್ದ ಜನರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಡಾ. ವಿಜಯಲಕ್ಷ್ಮೀಯವರು ನೀಡಿದರು. ಶಿಬಿರಾರ್ಥಿಗಳು ಗ್ರಾಮ ಮತ್ತು ಸುತ್ತಮುತ್ತಲಿನ ಗ್ರಾಮದ ಮನೆಮನೆಗೂ ತೆರಳಿ ವೃದ್ಧರು, ಮಹಿಳೆಯರು ಮೊದಲಾದವರನ್ನು ಕರೆತಂದು ಆರೋಗ್ಯ ತಪಾಸಣೆ ಮಾಡಿಸಿದರು. ಇದು ಗ್ರಾಮದ ಜನರ ಮೆಚ್ಚುಗೆ ಮತ್ತು ಅಭಿನಂದನಗೆ ಪಾತ್ರವಾಯಿತು. ಇದೇ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸಿ. ರಮೇಶ್‌ರವರು, ಖಜಾಂಚಿಗಳಾದ ಶ್ರೀ ಪುಟ್ಟಸ್ವಾಮಿ, ನಿರ್ಧೇಶಕರಾದ ಶ್ರೀ. ಕೆ. ವಿ. ನಾಗರಾಜು, ನಿವೃತ್ತ ಪ್ರಾಂಶುಪಾಲರಾದ ಡಾ. ಶಿವರಾಮುರವರು ಮತ್ತು ಕಾಲೇಜಿನ ಕೆಲವು ಅಧ್ಯಾಪಕರು ಉಪಸ್ಥಿತರಿದ್ದರು. ಬಂದಿದ್ದ ವೈದ್ಯಾಧಿಕಾರಿಗಳ ತಂಡವನ್ನು ಗೌರವಿಸಲಾಯಿತು.

ಅದೇ ದಿನ ಶಿಬಿರಾರ್ಥಿಗಳು ಚರಂಡಿಯಲ್ಲಿದ್ದ ಹೂಳು ಮತ್ತು ನೀರಿನಹೊಂಡದ ಸುತ್ತಲಿನ ಭಾಗಗಳನ್ನು ಸ್ವಚ್ಛಗೊಳಿಸಿದ್ದರು. ಅದೇ ದಿನ ಶಿಬಿರಾರ್ಥಿಗಳು ಮತ್ತು ಕಾಲೇಜಿನಿಂದ ಬಂದಿದ್ದ ಇತರೆ ವಿದ್ಯಾರ್ಥಿಗಳು ಸೇರಿ ಗ್ರಾಮ ಸಮೀಕ್ಷೆ ಮಾಡಿದರು. ಸಂಜೆ 6-30 ಕ್ಕೆ ಪೂಜ್ಯರ ಪುಣ್ಯ ದಿನವಾದ ಅಂದು ಪ್ರೊ. ಕಬ್ಬಾಳೇಗೌಡರವರು ಪೂಜ್ಯರನ್ನು ಕುರಿತ ಉಪನ್ಯಾಸ ನಡೆಸಿಕೊಟ್ಟರು. ನಮ್ಮ ಅಂಗಸಂಸ್ಥೆಯ ಡಿ.ವಿ.ವಿ ಶಾಲೆಯ ನಿವೃತ್ತ ಶಿಕ್ಷಕರಾದ ಶ್ರೀ ಚಿಕ್ಕ ಮರಿಗೌಡರವರು ಜಾನಪದ ಹಾಡುಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು, ಗ್ರಾಮದ ಮಹಿಳೆಯರಿಗೆ ಸೊಬಾನೆ ಗೀತಗಾಯನ ಸ್ಪರ್ಧೆ ನಡೆಸಿ ಬಹುಮಾನ ವಿತರಣೆ ಮಾಡಲಾಯಿತು. ಪ್ರೊ. ದೇವರಾಜು, ಪ್ರೊ. ಎಸ್. ಪಿ.

ರಮೇಶ್, ಲೆಫ್ಟಿನೆಂಟ್ ವಿಜೇಂದ್ರ ಮತ್ತು ಹಿರಿಯ ವಿದ್ಯಾರ್ಥಿ ನರಸಿಂಹಯ್ಯ ಗೀತಗಾಯನ ಮಾಡಿದರು. ಆ ದಿನ ಸಾಯಂಕಾಲ ಗ್ರಾಮದ ಜನಸ್ತೋಮವೇ ಸೇರಿ ಕಾರ್ಯಕ್ರಮವನ್ನು ರಂಗುಗೊಳಿಸಿದರು.

**ಶಿಬಿರದ ಐದನೇ ದಿನ :**

ದಿನಾಂಕ: 26-03-2018 ರ 5ನೇ ದಿನ ಬೆಳಿಗ್ಗೆ ಎಂದಿನಂತೆ ಪ್ರಾತವಿಧಿಗಲನ್ನು ಮುಗಿಸಿ, ನಂತರ ಧ್ವಜಾರೋಹಣ ಮಾಡಿ, ಬೆಳಗಿನ ಉಪಹಾರವನ್ನು ಮುಗಿಸಿ ಶ್ರಮಧಾನಕ್ಕೆ ಸಜ್ಜುಗೊಳಿಸಲಾಯಿತು. ಬೆಳಿಗ್ಗೆ 9-00 ರಿಂದ 1-00 ಗಂಟೆಯವರಿಗೆ ಜವನಮ್ಮನದೊಡ್ಡಿ ಗ್ರಾಮಕ್ಕೆ ಸೇರಿರುವ, ಮುತ್ತುರಾಯನದೊಡ್ಡಿಯಲ್ಲಿ, ಚರಂಡಿ, ದೇವಸ್ಥಾನದ ಸುತ್ತಮುತ್ತಲಿನ ಭಾಗವನ್ನು ಸ್ವಚ್ಛಗೊಳಿಸಲಾಯಿತು. ಮಧ್ಯಾಹ್ನ 3-00 ರಿಂದ 4-00 ಗಂಟೆಯವರೆಗೆ ಡಾ. ಎಸ್. ವಿ. ಲಕ್ಷ್ಮೀನಾರಾಯಣರವರು “ಸಮಾಜ ಮತ್ತು ಜೀವನಮೌಲ್ಯ” ಎಂಬ ವಿಷಯಕ್ಕೆ ಉಪನ್ಯಾಸ ನೇರವೇರಿಸಿದರು.

ಸಂಜೆ 6-30 ರಿಂದ 9-00 ಗಂಟೆಗೆ ಕನಕಪುರ ತಾಲ್ಲೂಕು ಕಾನೂನು ಸೇವಾ ಸಮಿತಿಯವರು “ಕಾನೂನು ಅರಿವು ಮತ್ತು ನೆರವು” ವಿಷಯದ ಅಡಿಯಲ್ಲಿ ಉಪನ್ಯಾಸ ಕಾರ್ಯಕ್ರಮ ನೆರವೇರಿಸಿಕೊಟ್ಟರು. ಗೌರವನ್ವಿತ ನ್ಯಾಯಮೂರ್ತಿಗಳಾದ ಶ್ರೀ ವೇಣುಗೋಪಾಲರವರು ಅಧ್ಯಕ್ಷತೆಯನ್ನು ವಹಿಸಿದ್ದರು ಮತ್ತು ಕನಕಪುರದ ವಕೀಲರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು, ವಕೀಲರಾದ ಪಿ. ಶಿವರುದ್ರಯ್ಯ “ಮಹಿಳಾ ಮತ್ತು ಆಸ್ತಿ ಹಕ್ಕು” ಶ್ರೀ ಮಂಜುನಾಥ್ “ಬಾಲ ಕಾರ್ಮಿಕರು” ಹಾಗು ಶ್ರೀಮತಿ ಅನಿತಾರವರು “ಬಾಲ್ಯ ವಿವಾಹ” ಕುರಿತು ಉಪನ್ಯಾಸವನ್ನು ನೀಡಿದರು. ಶಿಕ್ಷಕರಾದ ಶ್ರೀ ಶಿವಲಿಂಗಯ್ಯನವರು ಪ್ರೊ. ದೇವರಾಜುರವರು ರಂಗಗೀತೆಗಳನ್ನು ಹಾಡಿ ವೇದಿಕೆಯಲ್ಲಿದ್ದ ಗಣ್ಯರು ಮತ್ತು ಗ್ರಾಮಸ್ಥರನ್ನು ರಂಜಿಸಿದರು. ನಂತರ ಶಿಬಿರಾರ್ಥಿಗಳು “ಎರಡು ಮುತ್ತು” ಎಂಬ ನಾಟಕವನ್ನು ಪ್ರದರ್ಶಿಸಿ ಎಲ್ಲರನ್ನು ನಗೆಗಡಲಿನಲ್ಲಿ ಮುಳುಗಿಸಿದರು. ಪ್ರೊ. ಎಂ.ಎಸ್. ಕೆಂಪೇಗೌಡ, ಪ್ರೊ. ಹೇಮಾರವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**ಶಿಬಿರದ ಆರನೇ ದಿನ :**

ದಿನಾಂಕ: 27-03-2018 ರಂದು ಬೆಳಿಗ್ಗೆ ಎಂದಿನಂತೆ ಪ್ರಾತವಿಧಿಗಳನ್ನು ಮುಗಿಸಿ, ನಂತರ ಧ್ವಜಾರೋಹಣ ಮಾಡಿ, ಬೆಳಗಿನ ಉಪಹಾರವನ್ನು ಮುಗಿಸಿ ಶ್ರಮಧಾನಕ್ಕೆ ಸಜ್ಜುಗೊಳಿಸಲಾಯಿತು. ಬೆಳಿಗ್ಗೆ 10-00 ರಿಂದ 2-00 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಲಯನ್ಸ್ ಸಂಸ್ಥೆ ಮತ್ತು ಬೆಂಗಳೂರಿನ ಸಾಗರ ಆಸ್ಪತ್ರೆ, ವೈದ್ಯಾಧಿಕಾರಿಗಳು & ತಂಡದವರಿಂದ ರಕ್ತ ಪರೀಕ್ಷೆ, ಇ.ಸಿ.ಜಿ. ಮೂಳೆ ತಪಾಸಣೆ ಮಾಡಿ ಔಷಧಿ ವಿತರಿಸಲಾಯಿತು. ಕನಕಪುರದ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾದ ಶ್ರೀ ರಾಮಯ್ಯ, ಲಯನ್ ಪ್ರಶಾಂತ್, ಲಯನ್ ಸತೀಶ್ ಉಪಸ್ಥಿತರಿದ್ದರು. ವೈದ್ಯಾಧಿಕಾರಿಗಳನ್ನು ಶಿಬಿರಾಧಿಕಾರಿಗಳು ವಂದಿಸಿ, ಉಪಚರಿಸಿ ಅವರನ್ನು ಬೀಳ್ಕೊಟ್ಟರು. ಸುಮಾರು 150 ಕ್ಕಿಂತ ಹೆಚ್ಚಿನ ಜನರು ಇದರ ಲಾಭ ಪಡೆದಿದ್ದಾರೆ. ಅಲ್ಲದೆ ಶಿಬಿರಾರ್ಥಿಗಳು ಮುತ್ತುರಾಯನದೊಡ್ಡಿಯಲ್ಲಿನ ಚರಂಡಿಯನ್ನು ಸ್ವಚ್ಛಗೊಳಿಸಿದರು.

ಸಂಜೆ 6-00 ಗಂಟೆಗೆ ಆಧುನಿಕ ರೇಷ್ಮೆ ಕೃಷಿ ಮತ್ತು ತೋಟಗಾರಿಕೆ ಹಾಗೂ ಪುಷ್ಪಗಾರಿಕೆ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಇದರ ಅಧ್ಯಕ್ಷತೆಯನ್ನು ಶ್ರೀ ಮರಿಯಪ್ಪನವರು ವಹಿಸಿದ್ದರು. ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಯಾದ ಶ್ರೀ ಸುರೇಶ್, ಶ್ರೀ ವೆಂಕಟೇಶ್‌ರವರು ಗ್ರಾಮಸ್ಥರು ಮತ್ತು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿವೃತ್ತ ತೋಟಗಾರಿಕಾ ಅಧಿಕಾರಿಯಾದ ಶ್ರೀ ನಾಗರಾಜುರವರು ತೆಂಗಿನ ಮರಕ್ಕೆ ತಗಲುವ ನುಸಿ ರೋಗ, ಬೆಂಕಿಯ ರೋಗಗಳನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳು ಮತ್ತು ಇದಕ್ಕೆ ಸರ್ಕಾರದ ಅನುದಾನಗಳ ಬಗ್ಗೆ ತಿಳಿಸಿದರು. ಆರ್.ಇ.ಎಸ್.ನ ನಿರ್ದೇಶಕರಾದ ಶ್ರೀ ವೆಂಕಟೇಶಯ್ಯನವರು ಮಾತನಾಡಿ ಶಿಬಿರಾಧಿಕಾರಿ ಮತ್ತು ಶಿಬಿರಾರ್ಥಿಗಳನ್ನು ಅಭಿನಂದಿಸಿ ಕಾರ್ಯಕ್ರಮದ ಬಗ್ಗೆ ಸಂತೋಷವನ್ನು ವ್ಯಕ್ತ ಪಡಿಸಿದರು. ಇದೇ ವೇದಿಕೆಯಲ್ಲಿ ಸಸಿ ವಿತರಣಾ ಕಾರ್ಯಕ್ರಮದ ನೇತೃತ್ವವನ್ನು ಸನ್ಮಾನ್ಯ ಇಂಧನ ಸಚಿವರಾದ ಶ್ರೀ ಡಿ. ಕೆ. ಶಿವಕುಮಾರ್‌ರವರ ಆಪ್ತ ವರದಿಗಾರರು ಮತ್ತು ಜಿಲ್ಲಾ ಲಯನ್ಸ್ ನಿರ್ದೇಶಕರಾದ ಲಯನ್ ಮರಸಪ್ಪನವರು ವಹಿಸಿ ನೂರಕ್ಕಿಂತಲೂ ಹೆಚ್ಚಿನ ವಿವಿಧ ಜಾತಿಯ ಸಸ್ಯಗಳನ್ನು ಗ್ರಾಮಸ್ಥರು ಮತ್ತು ಶಿಭಿರಾರ್ಥಿಗಳಿಗೆ ನೀಡಿ ಪರಿಸರವನ್ನು ಉಳಿಸಬೇಕೆಂದು ವಿನಂತಿಸಿಕೊಂಡರು. ಇದಕ್ಕೆ ಪ್ರೊ. ಸತೀಶ್, ಪ್ರೊ. ದೇವರಾಜು, ಪ್ರೊ. ಎಸ್. ಪಿ. ರಮೇಶ್, ಪ್ರೊ. ಮಹಮದ್ ಖಲೀಲ್ ಉಪಸ್ಥಿತರಿದ್ದು, ಸಹಕಾರ ನೀಡಿದರು. ನಂತರ ಬೆಂಗಳೂರಿನ ಚಲನಚಿತ್ರ ತಂಡದ

ಮುಖ್ಯಸ್ಥರಾದ ಶ್ರೀ ಲೋಕೇಂದ್ರ ಸೂರ್ಯ, ನಟಿ ಕು. ಚೈತ್ರಾ, ಶ್ರೀ ಕೆಂಪೇಗೌಡ ಮೊದಲಾದವರು ಅನೇಕ ಹಾಡುಗಳನ್ನು ಹಾಡಿ ರಂಜಿಸಿದರು. ನಂತರ ಶಿಬಿರಾರ್ಥಿಗಳು "ಬಯಲಾದ ಬಣ್ಣ" ಎಂಬ ನಾಟಕವನ್ನು ಪ್ರದರ್ಶಿಸಿ ನೆರದಿದ್ದ ಎಲ್ಲರನ್ನೂ ರಂಜಿಸಿ ಮನಗೆದ್ದರು. ನಂತರ ಶಿಬಿರಾರ್ಥಿಗಳು ಪೈಯರ್ ಕ್ಯಾಂಪ್‌ನ್ನು ಮಾಡಿ, ಕುಣಿದು-ಕುಪ್ಪಳಿಸಿ ಅನಂದಿಸಿದರು. ಅಂದಿನ ಸಂಜೆಯ ಕಾರ್ಯಕ್ರಮಕ್ಕೆ ಇಡೀ ಗ್ರಾಮದ ಜನಸ್ತೋಮವೇ ನೆರೆದಿದ್ದು, ಶಿಬಿರಾರ್ಥಿಗಳ ಜೊತೆ ಖುಷಿಯನ್ನು ಹಂಚಿಕೊಂಡಿದ್ದು ವಿಶೇಷವಾಗಿತ್ತು.

**ಶಿಬಿರದ ಏಳನೇ ದಿನ :**

ದಿನಾಂಕ: 28-03-2018 ರಂದು ಶಿಬಿರದ ಕೊನೆ ದಿನವಾಗಿದ್ದು, ಬೆಳಗ್ಗೆ 8-00 ಗಂಟೆಗೆ ಗ್ರಾಮದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಂತೆ ಶಿಬಿರಾರ್ಥಿಗಳು ಮನೆಮನೆಗೆ ಹೋಗಿ ರಂಗೋಲಿ ಸ್ಪರ್ಧೆಗೆ ಅಣಿಯಾಗುವಂತೆ ಪ್ರೇರೇಪಿಸಿ ರಂಗೋಲಿಯನ್ನು ಬಿಡಿಸಲು ಸಹಕರಿಸಿದರು. ಹಾಗೆಯೇ ಬೆಳಗಿನ ಧ್ವಜಾರೋಹಣ ಕಾರ್ಯಕ್ರಮವನ್ನು ಮಾಡಿ ಸಮಾರೋಪ ಸಮಾರಂಭದ ಕಾರ್ಯ ವೈಖರಿ ಬಗ್ಗೆ ಶಿಬಿರಾರ್ಥಿಗಳಿಗೆ ತಿಳಿಸಿ ವೇದಿಕೆಯನ್ನು ಸಿದ್ಧ ಮಾಡಿಕೊಂಡು ಕಾರ್ಯಕ್ರಮವನ್ನುಯಶಸ್ವಿಗೊಳಿಸಲು ಶಿಬಿರಾರ್ಥಿಗಳಿಗೆ ಶಿಬಿರಾಧಿಕಾರಿಗಳು ತಿಳಿಸಿದರು. ವೇದಿಕೆ ಸಿದ್ಧಗೊಳಿಸುವಷ್ಟರಲ್ಲಿ ರಂಗೋಲೆ ಸ್ಪರ್ಧೆಯ ನೇತೃತ್ವವನ್ನು ವಹಿಸಿದ್ದ ಬಹುಮಾನವನ್ನು ಪ್ರೊ.ಶಾಂತಕುಮಾರಿ. ಪ್ರೊ. ಜ್ಯೋತಿ. ಪ್ರೊ. ಶೃತಿ ಮತ್ತು ಪ್ರೊ. ಸೌಮ್ಯ ಪ್ರತಿ ಮನೆಗಳ ಮುಂದೆ ಬಿಡಿಸಿದ್ದ ರಂಗೋಲಿಯನ್ನು ವೀಕ್ಷಿಸಿ ಬಹುಮಾನವನ್ನು ಆಯ್ಕೆ ಮಾಡಿಕೊಂಡರು.ಸಮಾರೋಪಸಮಾರಂಭ ಬೆಳಗ್ಗೆ 11-30 ಕ್ಕೆ ಸರಿಯಾಗಿ ಆರಂಭಗೊಂಡಿತ್ತು. ಇದರ ಅಧ್ಯಕ್ಷತೆಯನ್ನು ಆರ್.ಇ.ಎಸ್. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎಂ.ಎಲ್. ಶಿವಕುಮಾರ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಗೌ. ಕಾರ್ಯದರ್ಶಿಗಳಾದ ಸಿ. ರಮೇಶ್, ಉಪ ಪ್ರಾಂಶುಪಾಲರಾದ ಪ್ರೊ. ನಂಜುಂಡಯ್ಯ ಆಗಮಿಸಿದ್ದರು. ಶಿಬಿರದ ವರದಿಯನ್ನು ಶಿಬಿರಾರ್ಥಿ ಚಂದನ್ ಒಪ್ಪಿಸಿದರು. ಸೋಬಾನೆ ಗೀತೆ, ರಂಗ ಗೀತೆ ಮತ್ತು ರಂಗೋಲೆ ಸ್ಪರ್ಧೆಯಲ್ಲಿ ಆಯ್ಕೆಯಾದ ಸ್ಪರ್ಧಿಗಳಿಗೆ ಬಹುಮಾನವನ್ನು ಗಣ್ಯರು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಪ್ರೊ. ದೇವರಾಜುರವರು ಎಲ್ಲರನ್ನು ಸ್ವಾಗತಿಸಿದರೆ, ಶಿಬಿರಾಧಿಕಾರಿಯಾದ ಎ.ಪಿ. ಪ್ರಕಾಶ್ ಶಿಬಿರದ ಯಶಸ್ವಿಗೆ ಕಾರಣರಾದ ಎಲ್ಲರನ್ನು ಸ್ಮರಿಸಿ ವಂದಿಸಿದರು.

ಹೀಗೆ 7 ದಿನಗಳ ಕಾಲ ನಡೆದ ಶಿಬಿರವು ಚರಂಡಿ ಶುಚಿತ್ವ, ಆರೋಗ್ಯ ತಪಾಸಣೆ, ಸಸಿ ವಿರತಣೆ , ಪಶು ಆರೊಗ್ಯ ತಪಾಸಣೆ, ಕಾನೂನು ಅರಿವು, ಸರ್ಕಾರಿ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳು, ದೇವಸ್ಥಾನ ಮತ್ತು ನೀರಿನ ಕೊಳಗಳ ಸ್ವಚ್ಛತೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಾದ ಜನಜಾಗೃತಿ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಶಿಬಿರದ ಯಶಸ್ವಿಗೆ ಕಾರಣರಾದ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜನಾಧಿಕಾರಿ ಮತ್ತು ಸಿಬ್ಬಂಧಿ, ಗ್ರಾಮ ವಿದ್ಯಾ ಪ್ರಚಾರಕ ಸಂಘದ ಪದಾಧಿಕಾರಿಗಳು, ಜವನಮ್ಮನದೊಡ್ಡಿ ಗ್ರಾಮಸ್ಥರು ಮತ್ತು ಅಲ್ಲಿನ ಸಂಘ-ಸಂಸ್ಥೆಗಳು, ಚಾಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಮತ್ತು ಕಾಲೇಜಿನ ಬೋಧಕ / ಭೋಧಕೇತರ ಸಿಬ್ಬಂದಿ ವರ್ಗ, ಸ್ಥಳೀಯ ಶಾಲಾ ಸಿಬ್ಬಂದಿ ವರ್ಗ ವೈದ್ಯಾಧಿಕಾರಿಗಳು ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿಗಳು, ಮಾಧ್ಯಮದವರು, ಹಿರಿಯ ಎನ್.ಎಸ್.ಎಸ್. ವಿದ್ಯಾರ್ಥಿಗಳು, ಲಯನ್ಸ್ & ಅಯೋ ಕ್ಲಬ್ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನು ಸ್ಮರಿಸಿ ಎನ್.ಎಸ್.ಎಸ್. ಘಟಕವು ಧನ್ಯವಾದಗಳನ್ನು ಅರ್ಪಿಸುತ್ತದೆ.

ವಂದನೆಗಳೊಂದಿಗೆ.

**ಎನ್.ಎಸ್.ಎಸ್. ಅಧಿಕಾರಿಗಳು** ಪ್ರಾಂಶುಪಾಲರು.